# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 33 ಫ್ರಾ.ಸಾ. : 33**

| | | |
|---|---|---|
| ಸಾಕ್ಷಿಯ ಹೆಸರು | : | ಮಹೇಶ ಗುರುದಾಸ ಸಾಳಗಾಂವಕರ್ |
| ತಂದೆಯ ಹೆಸರು | : | ಗುರುದಾಸ ಸಾಳಗಾಂವಕರ್ |
| ವಯಸ್ಸು | : | 39 ವರ್ಷ |
| ಕೆಲಸ | : | ಚಾಲಕ |
| ವಾಸ | : | ಮಲ್ಲಾಪುರ, ಕಾರವಾರ |

**ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಈ ಪ್ರಕರಣ ದಾಖಲಾಗುವ ಸಮಯದಲ್ಲಿ ನಾನು ಟಾಟಾ ಏಸ್ ವಾಹನ ಸಂಖ್ಯೆ ಕೆಎ-30/9563 ನೇದರ ಮಾಲೀಕನಿದ್ದು, ಅದನ್ನು ಬಾಡಿಗೆಗಾಗಿ ಓಡಿಸುತ್ತಿದ್ದೆ. ಈ ಪ್ರಕರಣ ದಾಖಲಾಗುವ ಸಮಯದಲ್ಲಿ ನಾನು ಕಧ್ರಾದಲ್ಲಿ ವಾಸವಾಗಿದ್ದೆ, ಆದರೆ ಈಗ ಮಲ್ಲಾಪುರದಲ್ಲಿ ವಾಸವಾಗಿರುತ್ತೇನೆ. ದಿಃ 15-02-2014 ರಂದು ಬೆಳಿಗ್ಗೆ ಸುಮಾರು 10-00 ಗಂಟೆ ಸಮಯದಲ್ಲಿ ನಾನು ನನ್ನ ಟಾಟಾ ಏಸ್ ವಾಹನವನ್ನು ತೆಗೆದುಕೊಂಡು ಬಾಡಿಗೆಗಾಗಿ ಹೋಗುತ್ತಿದ್ದಾಗ, ರಾಜೀವ ನಗರದಲ್ಲಿ ಪೊಲೀಸರು ನನ್ನ ವಾಹನನ್ನು ನಿಲ್ಲಿಸಿ, ರಾಜೀವ ನಗರದ ವೇಲು ಹಾಗೂ ಆತನ ಮಕ್ಕಳ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಬರುವಂತೆ ತಿಳಿಸಿದ್ದು, ಅದರಂತೆ ನಾನು, ವೇಲು ಹಾಗೂ ಅವರ ಮಕ್ಕಳ ಶವಗಳನ್ನು ನನ್ನ ಟಾಟಾ ಏಸ್ ವಾಹನದಲ್ಲಿ ಕಾರವಾರದ ಸಿವಿಲ್ ಆಸ್ಪತ್ರೆಯ ಶವಗಾರಕ್ಕೆ ತೆಗೆದುಕೊಂಡು ಬಂದಿರುತ್ತೇನೆ. ಶವಗಳನ್ನು ತರುವಾಗ ಪೊಲೀಸರು ನನ್ನ ಜೊತೆ ಬಂದಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

2. 2013-2014 ನೇ ಸಾಲಿನಲ್ಲಿ ನನ್ನ ವಿರುದ್ಧ ಒಂದು ಡೈವೋರ್ಸ್ ಪ್ರಕರಣ ಇತ್ತು. ಆ ದಿನ ನಾನು ಯಾವುದೇ ಶವಗಳನ್ನು ನನ್ನ ಟಾಟಾ ಏಸ್ ವಾಹನದಲ್ಲಿ ಕಾರವಾರದ ಸಿವಿಲ್

ಆಸ್ಪತ್ರೆಯ ಶವಗಾರಕ್ಕೆ ತೆಗೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಸದರಿ ಶವಗಳನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ